**ಸಾಕ್ಷಿಯನ್ನು ದಿಃ *04/02/2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಃ ಶ್ರೀಮತಿ ಆರಎಸಬಿ ವಕೀಲರಿಂದ 2 ನೇ ಎದುರುದಾರರ ಪರವಾಗಿ.**

ಅಪಘಾತ ದಿನದಂದು ನಾನು ಹುಬ್ಬಳ್ಳಿ ರಸ್ತೆಯಲ್ಲಿರುವ ಗಾರ್ಮೆಂಟ ಫ್ಯಾಕ್ಟರಿಯಿಂದ ಹೊರಗೆ ಬರುತ್ತಿದ್ದೆ. ಸದರಿ ಫ್ಯಾಕ್ಟರಿ ಖಚಿತವಾಗಿ ಎಲ್ಲಿ ಬರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಆದ್ದರಿಂದ ಸದರಿ ಫ್ಯಾಕ್ಟರಿ ಹತ್ತಿರ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಖಚಿತವಾದ ಸ್ಥಳ ನನಗೆ ಹೇಳಲು ಬರುತ್ತಿಲ್ಲ ಎಂದರೆ ಸರಿಯಲ್ಲ.

ಅಪಘಾತ ದಿನದಂದು ಮೋಟಾರುಸೈಕಲ ನಂ.ಕೆಎ 49 ಇಬಿ 8262 ಧಾರವಾಡ ಕಡೆಯಿಂದ ಹುಬ್ಬಳ್ಳಿ ಕಡೆಗೆ ಬರುತ್ತಿತ್ತು. ಅಪಘಾತ ಸಂಜೆ 5 ಗಂಟೆ ಆಗಿದ್ದು, ಸದರಿ ರಸ್ತೆ ವಾಹನ ದಟ್ಟಣೆಯುಳ್ಳ ಅಗಲವಾದ ರಸ್ತೆ ಎಂದರೆ ನಿಜ. ಸದರಿ ರಸ್ತೆಯಲ್ಲಿ ಬಿಆರಟಿಎಸ ಬಸ್ಸುಗಳು ಹೋಗಲು ಪ್ರತ್ಯೇಕ ರಸ್ತೆ ಇರುತ್ತದೆ ಎಂದರೆ ನಿಜ. ಸದರಿ ಫ್ಯಾಕ್ಟರಿಯಲ್ಲಿ 10 ಸಾವಿರ ಜನಕ್ಕಿಂತ ಹೆಚ್ಚಿಗೆ ಜನ ಕೆಲಸ ಮಾಡುತ್ತಾರೆ. 5 ಗಂಟೆಗೆ ಕೆಲಸ ಮುಗಿದ ತಕ್ಷಣ ಸಾಕಷ್ಟು ಜನ ಫ್ಯಾಕ್ಟರಿಯಿಂದ ಹೊರಗೆ ಬರುತ್ತಾರೆ ಎಂದರೆ ನಿಜ. ನಾನು ನನ್ನ ಸ್ವಂತ ಊರಾದ ಹೀರೆಕುಂಬಿಯಿಂದ ಸದರಿ ಫ್ಯಾಕ್ಟರಿಗೆ ದಿನಾಲು ಕೆಲಸ ಮಾಡಲು ಬರುತ್ತೇನೆ. ಈ ರೀತಿ ನಾನು ಮೂರು ಬಸ್ಸುಗಳನ್ನು ಬದಲಾವಣೆ ಮಾಡಬೇಕಾಗುತ್ತದೆ ಎಂದರೆ ನಿಜ. ಈ ರೀತಿ ಊರಿಗೆ ಹೋಗುವ ಅವಸರದಲ್ಲಿ ಮೂರು ಬಸ್ಸುಗಳನ್ನು ಬದಲಾಯಿಸುವ ಅವಸರದಲ್ಲಿ ಅಜಾಗೂರೂಕತೆಯಿಂದ ರಸ್ತೆಯನ್ನು ದಾಟುವ ಪ್ರಯತ್ನ ಮಾಡಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ಸದರಿ ಅಪಘಾತವು ನನ್ನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಯಾವುದೇ ಮೋಟಾರುಸೈಕಲನಿಂದ ಅಪಘಾತವಾಯಿತು ಎಂದು ಗೊತ್ತಿರಲಾರದ ಕಾರಣ ಒಂದು ದಿನ ವಿಳಂಬ ಮಾಡಿ ದೂರನ್ನು ಸಲ್ಲಿಸಿರುತ್ತೇನೆ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ.

ದೂರನ್ನು ನನ್ನ ಪತಿ ಸಲ್ಲಿಸಿರುತ್ತಾರೆ ಎಂದರೆ ನಿಜ. ದೂರಿನಲ್ಲಿ ಮೋಟಾರುಸೈಕಲ ನಂಬರ ಬರೆಸಿಲ್ಲ ಎಂದರೆ ಸರಿಯಲ್ಲ. ಮೋಟಾರುಸೈಕಲ ಚಾಲಕ ಅತೀವೇಗ ಮತ್ತು ನಿರ್ಲಕ್ಷತದಿಂದ ವಾಹನ ಚಲಾಯಿಸಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಪರಿಹಾರ ಹಣಕ್ಕೆ ಅನುಕೂಲವಾಗಿ ಪೊಲೀಸರೊಂದಿಗೆ ಮಿಲಾಪಿಯಾಗಿ ನಾನು ಸ್ಪಷ್ಟೀಕರಣ ಮಾಡಿರುವ ದಾಖಲೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ನನ್ನನು ಫ್ಯಾಕ್ಟರಿಯಲ್ಲಿ ಕೆಲಸ ಮಾಡುವವರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋದರು. ನನಗೆ ಆಗಿರುವ ಗಾಯಗಳು ಸಾದಾ ಸ್ವರೂಪದ ಗಾಯಗಳು ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ನನ್ನ ಎಡಗಾಲಿಗೆ ಏಟಾಗಿ ಶಸ್ತ್ರಚಿಕಿತ್ಸೆ ಸಹ ಮಾಡಿರುತ್ತಾರೆ. ಸದರಿ ಜಿಲ್ಲಾ ಆಸ್ಪತ್ರೆಯಲ್ಲಿ ಐದು ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಸದರಿ ಹೇಳಿಕೆ ದಾಖಲೆ ರಹಿತ ಸುಳ್ಳು ಹೇಳಿಕೆ ಎಂದರೆ ಸರಿಯಲ್ಲ. ಜಿಲ್ಲಾ ಆಸ್ಪತ್ರೆಯಿಂದ ನಾನು ಮಿರಜ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರೆಸಿ ನಂತರ ಸಪ್ತಾಪೂರದಲ್ಲಿರುವ ಹಂಚಿನಾಳ ವೈದ್ಯರ ಬಳಿ ಸಹ ಚಿಕಿತ್ಸೆ ಪಡೆದುಕೊಂಡಿದ್ದು ಇರುತ್ತದೆ. ನನಗೆ ಆಗಿರುವ ಅಪಘಾತದ ಗಾಯಕ್ಕೂ ಮತ್ತು ಮಿರಜ ಆಸ್ಪತ್ರೆಯಲ್ಲಿ ಪಡೆದಿರುವ ಚಿಕಿತ್ಸೆಗೆ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಈ ರೀತಿ ಚಿಕಿತ್ಸೆ ಪಡೆದುಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯೋಪಚಾರ ಪುಕ್ಕಟೆಯಾಗಿ ಮಾಡುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಜಿಲ್ಲಾ ಆಸ್ಪತ್ರೆಯವರು ಯಾವುದೇ ಸೂಕ್ತವಾದ ಚಿಕಿತ್ಸೆ ನೀಡಿಲ್ಲ, ಆದ್ದರಿಂದ ನಾನು ಖಾಸಗಿ ಆಸ್ಪತ್ರೆಯಾದ ಮಿರಜನಲ್ಲಿ ಚಿಕಿತ್ಸೆ ಪಡೆದಿರುತ್ತೇನೆ ಎಂದು ಉತ್ತರಿಸುತ್ತಾರೆ. ನಾನು ಸಲ್ಲಿಸಿರುವ ವೈದ್ಯಕೀಯ ವೆಚ್ಚದ ರಶೀದಿಗಳು ಸೃಷ್ಟೀಕರಣ ಮಾಡಿರುವ ಮತ್ತು ನನಗೆ ಸಂಬಂಧವಿಲ್ಲದ ದಾಖಲಾತಿಗಳು ಎಂದರೆ ಸರಿಯಲ್ಲ. ನನಗೆ ಯಾವುದೇ ಶಾಶ್ವತ ಅಂಗನ್ಯೂನತೆಯಾಗಿಲ್ಲ ಎಂದರೆ ಸರಿಯಲ್ಲ. ನಾನು ಈ ಮೊದಲಿನಂತೆ ನನ್ನ ದೈನಂದಿನ ಕೆಲಸಗಳನ್ನು ಮಾಡಿಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ರಾಯಾಪೂರದ ಫ್ಯಾಕ್ಟರಿನಲ್ಲಿ ಕೆಲಸ ಮಾಡುತ್ತಿದ್ದು, ತಿಂಗಳಿಗೆ 18 ಸಾವಿರ ರೂಪಾಯಿಗಳನ್ನು ಗಳಿಸುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಪ್ರಸ್ತುತ ಯಾವುದೇ ಕೆಲಸ ಮಾಡುತ್ತಿಲ್ಲ. ಅಪಘಾತದ ಚಿಕಿತ್ಸೆಗಾಗಿ 1 ಲಕ್ಷ ರೂಪಾಯಿಗಳ ಕೈಗಡ ಸಾಲ ಪಡೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮೋಟಾರುಸೈಕಲ ಚಾಲಕನಿಗೆ ಸೂಕ್ತವಾದ ಚಾಲನಾ ಪರವಾನಿಗೆ ಪತ್ರವಿರಲಿಲ್ಲ, ಆದ್ದರಿಂದ 1 ನೇ ಎದುರುದಾರರು ವಿಮೆ ಷರತ್ತುಗಳನ್ನು ಉಲ್ಲಂಘನೆ ಮಾಡಿರುವ ಕಾರಣ 2 ನೇ ಎದುರುದಾರ ವಿಮೆ

ಕಂಪನಿಯವರು ಯಾವುದೇ ಪರಿಹಾರ ಹಣ ಕೊಡಲು ಬಾದ್ಯಸ್ಥರಲ್ಲ ಎಂದು ಸೂಚಿಸುವ ನಿಮ್ಮ ಎಲ್ಲ ಸಲಹೆಗಳು ಸರಿಯಲ್ಲ.

***ಮರು ವಿಚಾರಣೆ : ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.